ಸಿ.ಸಿ. ಸಂಃ 369/2018 ಪಿ.ಡಬ್ಲ್ಯು 03

ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

ಸಿ ಸಿ ನಂ.**369/2018**

ದಿಃ **09-03-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | ನಾರಾಯಣಪ್ಪ | ಸಿ.ಡಬ್ಲ್ಯೂ | **01** |
| ವಯಸ್ಸು | 66 ವರ್ಷ | ಪಿ.ಡಬ್ಲ್ಯು: | **03** |
| ತಂದೆಯ / ಗಂಡನ ಹೆಸರು | ಲೇಟ್ ನರಸಿಂಹಪ್ಪ | | |
| ವೃತ್ತಿ | ನಿವೃತ್ತ ಅಬಕಾರಿ ಉಪನಿರೀಕ್ಷಕರು | | |
| ವಾಸಸ್ಥಳ | ಗೌರಿಬಿದನೂರು | | |

ಮುಖ್ಯ ವಿಚಾರಣೆಃಃ ಶ್ರೀ ಸರ್ಕಾರಿ ಅಭಿಯೋಜಕರಿಂದಃ

ನಾನು ಗೌರಿಬಿದನೂರು ವಲಯ ಕಚೇರಿಯಲ್ಲಿ ಅಬಕಾರಿ ಉಪನಿರೀಕ್ಷಕರಾಗಿ ದಿನಾಂಕ 05-09-2013 ರಿಂದ 10-08-2017 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 03-09-2016 ರಂದು ಸಾಯಂಕಾಲ 4.00 ಗಂಟೆ ಸಮಯದಲ್ಲಿ ಕಚೇರಿ ವಾಹನ ಸಂಖ್ಯೆ ಕೆಎ 40 ಜಿ 0544 ಮಹೇಂದ್ರ ಬುಲೇರೋ ವಾಹನದಲ್ಲಿ ನಾನು ಮತ್ತು ಚಾಸಾ-4 ರವರೊಂದಿಗೆ ಗೌರಿಬಿದನೂರು-ಹುದುಗೂರು ರಸ್ತೆಯಲ್ಲಿ ಗಸ್ತು ಮಾಡುತ್ತಿದ್ದಾಗ ಬಂದ ಖಚಿತ ವರ್ತಮಾನದ ಮೇರೆಗೆ ನಾವು ವಾಹನಗಳನ್ನು ಬೈಚಾಪುರ ಕ್ರಾಸ್ ಬಳಿ ತಪಾಸಣೆ ಮಾಡಲು ನಿಂತಿದ್ದಾಗ ಬೈಚಾಪುರ ಕಡೆಯಿಂದ ಒಂದು ದ್ವಿಚಕ್ರ ವಾಹನ ಬರುತ್ತಿರುವುದು ಕಂಡು ಬಂದಿತು. ಸದರಿ ವಾಹನದಲ್ಲಿ ಇಬ್ಬರು ಆಸಾಮಿಗಳು ಇರುವುದು ಕಂಡು ಬಂದಿತು. ಸಮವಸ್ತ್ರದಲ್ಲಿ ಇದ್ದಂತಹ ನಮ್ಮನ್ನು ಕಂಡು ಗಾಬರಿಗೊಂಡು ಓಡಲು ಪ್ರಯತ್ನ ಮಾಡಿದರು. ನಮ್ಮ ಸಿಬ್ಬಂದಿ ಅವರನ್ನು ತಡೆದು ನಿಲ್ಲಿಸಿದರು. ಸದರಿ ವಾಹನದ ಚಾಲಕನ ಹಿಂಭಾಗ ಮತ್ತು ಹಿಂಬದಿ ಸವಾರನ ಮುಂದೆ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನ್ ಇರುವುದು ಕಂಡು ಬಂದಿತು. ಸದರಿ ವ್ಯಕ್ತಿಗಳನ್ನು ಕೇಳಲಾಗಿ ಸದರಿ ಕ್ಯಾನ್ ನಲ್ಲಿ ಸೇಂದಿ ಇದೆ ಎಂದು ಮತ್ತು ಅದನ್ನು ಆಂಧ್ರ ಗಡಿ ಭಾಗದ ಗೌರಗಾನಹಳ್ಳಿಯಿಂದ ತಂದಿರುವುದಾಗಿ ತಿಳಿಸಿದರು.

ನ್ಯಾಯಾಲಯದಿಂದ ವಾರಂಟ್ ಪಡೆಯಲು ಸಮಯದ ಅಭಾವ ಇದ್ದ ಕಾರಣ ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರವನ್ನು ತಯಾರು ಮಾಡಿ ಫ್ರಾಸಾ-1 ಮತ್ತು 2 ರವರನ್ನು ಪಂಚರಾಗಿ ಬರಮಾಡಿಕೊಂಡು ಶೋಧನೆ ಮಾಡಿದೆವು. ಸದರಿ ಕ್ಯಾನ್ ನ ಮುಚ್ಚಳವನ್ನು ತೆರೆದು ನೋಡಲಾಗಿ ಬಿಳಿ ಬಣ್ಣದ ದ್ರಾವಣ ಇರುವುದು ಕಂಡು ಬಂದಿತು

ಮತ್ತು ಅದು ಘಾಟು ವಾಸನೆಯಿಂದ ಕೂಡಿತ್ತು. ನಂತರ ವಾಹನವನ್ನು ಪರಿಶೀಲಿಸಲಾಗಿ ಅದರ ಸಂಖ್ಯೆ ಕೆಎ 40 ವಿ5285 ಹೀರೋ ಸ್ಪ್ಲೆಂಡರ್ ಪ್ಲಸ್ ಆಗಿತ್ತು. ಸದರಿ ಮಾಲು ಮತ್ತು ವಾಹನವನ್ನು ನಿಪಿ-1 ರಂತೆ ಪಂಚನಾಮೆ ಜರುಗಿಸಿ ಅಮಾನತ್ತುಪಡಿಸಿಕೊಂಡೆನು. ನಿಪಿ-1 ಅನ್ನು ಸಂಜೆ 4.00 ಗಂಟೆ ಇಂದ 5.00 ಗಂಟೆಯವರೆಗೆ ಜರುಗಿಸಿರುತ್ತೇನೆ. ಸ್ಥಳದಲ್ಲಿ ನಿಪಿ-2 ಅನ್ನು ತಯಾರು ಮಾಡಿದೆನು. ಅಮಾನತ್ತುಪಡಿಸಿಕೊಂಡ ಮಾಲಿನ ಪೈಕಿ 500 ಮಿಲಿ ಯಷ್ಟು ರಾಸಾಯನವನ್ನು ಪ್ರತ್ಯೇಕವಾಗಿ ಬಿಳಿ ಪ್ಲಾಸ್ಟಿಕ್ ಬಾಟಲ್ ನಲ್ಲಿ ಮಾದರಿ ತೆಗೆಯಲಾಯಿತು. ಸದರಿ ಮಾದರಿಯನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಮುದ್ರೆ ಮಾಡಲಾಯಿತು. ನಂತರ ಆಪಾದಿತ, ಮಾಲು ಮತ್ತು ವಾಹನದೊಂದಿಗೆ ಕಚೇರಿಗೆ ಬಂದು ಪ್ರವ ವರದಿಯನ್ನು ನಮೂದಿಸಿಕೊಂಡು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತೆತೇನೆ. ಸಾಕ್ಷಿಗೆ ನಿಪಿ-**1** ಅನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**1** ಸಿ ಎಂದು ಗುರುತಿಸಲಾಯಿತು.

ಸಾಕ್ಷಿಗೆ ದಿನಾಂಕ 03-09-2016 ರ ಶೋಧನಾ ಸಮುಚಿತ ಆಧಾರವನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**3** ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**3** ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರವ ವರದಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**4** ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**4** ಎ ಎಂದು ಗುರುತಿಸಲಾಯಿತು. ನಿಪಿ-2 ಅನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**2** ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆಪಾದಿತರವನ್ನು ಮತ್ತು ಮುಮಾ-1 ಅನ್ನು ನೋಡಿ ಗುರುತಿಸಿದರು. ವಾಹನವನ್ನು ನೋಡಿ ಗುರುತಿಸುತ್ತೇನೆ.

ದಿನಾಂಕ 20-09-2016 ರಂದು ಸಂಖ್ಯೆ ಕೆಎ 40 ವಿ5285 ಹೀರೋ ಸ್ಪ್ಲೆಂಡರ್ ಪ್ಲಸ್ ಬಿ ಎಕ್ಸ್ಟ್ರಾಕ್ಟ್ ವರದಿಯನ್ನು ನೀಡುವಂತೆ ಪತ್ರ ಬರೆದಿರುತ್ತೇನೆ. ಸಾಕ್ಷಿಗೆ ದಿನಾಂಕ 29-09-2016 ರ ಪತ್ರವನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**5** ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**5** ಎ ಎಂದು ಗುರುತಿಸಲಾಯಿತು. ದಿನಾಂಕ 06-10-2016 ರಂದು ಬಿ ಎಕ್ಸ್ಟ್ರಾಕ್ಟ್ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ದಿನಾಂಕ 06-10-2016 ರ ಬಿ ಎಕ್ಸ್ಟ್ರಾಕ್ಟ್ ವರದಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**6** ಎಂದು ಅದರಲ್ಲಿರುವ

ಸಾಕ್ಷಿಯ ಸಹಿಯನ್ನು ನಿಪಿ-**6** ಎ ಎಂದು ಗುರುತಿಸಲಾಯಿತು. ದಿನಾಂಕ 09-11-2016 ರಂದು ಬಿ ಎಕ್ಸ್ಟ್ರಾಕ್ಟ್ ವರದಿಯನ್ನು ಚಿಕ್ಕಬಳ್ಳಾಪುರ ಅಬಕಾರಿ ಉಪಆಯುಕ್ತರಿಗೆ ಕಳುಹಿಸಿಕೊಟ್ಟಿರುತ್ತೇನೆ. ಮಾದರಿ ಮಾಲನ್ನು ಚಾಸಾ-5 ರವರ ಮುಖಾಂತರ ದಿನಾಂಕ 09-11-2016 ರಂದು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಗೆ ದಿನಾಂಕ 09-11-2016 ರ ಪತ್ರವನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**7** ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**7** ಎ ಎಂದು ಗುರುತಿಸಲಾಯಿತು. ದಿನಾಂಕ 17-02-2017 ರಂದು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ದಿನಾಂಕ 25-11-2016 ರ ರಸಾಯನಿಕ ವಿಶ್ಲೇಷಣಾ ವರದಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**8** ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**8** ಎ ಎಂದು ಗುರುತಿಸಲಾಯಿತು. ದಿನಾಂಕ 18-02-2017 ರಂದು ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲನ್ನು ನಾಶಪಡಿಸಲು ಅನುಮತಿ ಕೋರಿ ಪತ್ರ ಬರೆದಿರುತ್ತೇನೆ. ಸಾಕ್ಷಿಗೆ ದಿನಾಂಕ 18-02-2017 ರ ಪತ್ರವನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**9** ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**9** ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ್ವತ್ತಿನ ಪಟ್ಟಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**10** ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**10** ಎ ಎಂದು ಗುರುತಿಸಲಾಯಿತು. ದಿನಾಂಕ 07-03-2017 ರಂದು ತನಿಖೆಯನ್ನು ಪೂರ್ಣಗೊಳಿಸಿ ಆಪಾದಿತರ ವಿರುದ್ಧ ಸಾಕ್ಷ್ಯಾಧಾರಗಳು ಸಾಬೀತಾದ ಕಾರಣ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಪಾಟೀ ಸವಾಲುಃ ಆಪಾದಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು